# BLDE

## (DEEMED TO BE UNIVERSITY)

Declared as Deemed to be University u/s 3 of UGC Act, 1956

The Constituent College

SHRI B. M. PATIL MEDICAL COLLEGE, HOSPITAL & RESEARCH CENTRE, VIJAYAPURA

**EXPRESS READ**

**Best hosp award to Shri BM centre-**

Vijayapura: Ministry of Health and Family Welfare of Government of India has awarded Shri B M Patil Medical College, Hospital and Research Centre as best hospital as per the Kayakalp guidelines established by the year 2019-20. The hospital has been awarded recognising its efforts toward promoting hygiene.

THE INDIAN EXPRESS Sat, 30 Nove epaper.newir

# ಉಚಿತ ನೇತ್ರ ತಪಾಸಣೆ ಶಿಬಿರ ಯಶಸ್ವಿ

ವಿಜಯಪುರ: ಬಿಎಲ್‌ಡಿಇ ಸಂಸ್ಥೆಯ ಬಿ.ಎಂ. ಪಾಟೀಲ ವೈದ್ಯಕೀಯ ಆಸ್ಪತ್ರೆಯಲ್ಲಿ ಲಯನ್ಸ್ ಸಂಸ್ಥೆ ಜಮಖಂಡಿ, ಬಾಗಲಕೋಟೆ ಜಿಲ್ಲಾ ಅಂಧತ್ವ ನಿವಾರಣಾ ಸಂಸ್ಥೆ, ಕರಿಸಿದ್ಧೇಶ್ವರ ಸೇವಾ ಸಂಘ ಕೊಣ್ಣೂರ ಸಹಯೋಗದಲ್ಲಿ ಜಮಖಂಡಿ ತಾಲೂಕಿನ ಕೊಣ್ಣೂರ ಗ್ರಾಮದಲ್ಲಿ ಇತ್ತೀಚೆಗೆ ಉಚಿತ ನೇತ್ರ ತಪಾಸಣೆ ಶಿಬಿರ ಏರ್ಪಡಿಸಲಾಗಿತ್ತು.

ಶಿಬಿರದಲ್ಲಿ 190ಕ್ಕೂ ಹೆಚ್ಚು ರೋಗಿಗಳಿಗೆ ತಪಾಸಣೆ ಮಾಡಲಾಯಿತು. ಶಸ್ತ್ರಚಿಕಿತ್ಸೆಗೆ ಅಗತ್ಯವಿದ್ದ 40 ರೋಗಿಗಳಿಗೆ ಬಿಎಲ್‌ಡಿಇ ಆಸ್ಪತ್ರೆಯಲ್ಲಿ ಉಚಿತ ನೇತ್ರ ಶಸ್ತ್ರ ಚಿಕಿತ್ಸೆ ನೆರವೇರಿಸಲಾಯಿತು ಎಂದು ನೇತ್ರ ವಿಭಾಗ ಮುಖ್ಯಸ್ಥ ಡಾ| ಸುನೀಲ ಬಿರಾದಾರ ತಿಳಿಸಿದ್ದಾರೆ.

ನೇತ್ರ ತಜ್ಞರಾದ ಡಾ| ವಲ್ಲಭ.ಕೆ., ಡಾ| ರಾಘವೇಂದ್ರ ಇಜೇರಿ, ಡಾ| ರಮ್ಯಾ ಕಾರಜೋಳ, ಡಾ| ಜ್ಯೋತಿ ಇಜೇರಿ ಮತ್ತಿತರರು ಉಚಿತ ನೇತ್ರ ತಪಾಸಣೆ ಹಾಗೂ ಶಸ್ತ್ರ ಚಿಕಿತ್ಸಾ ಶಿಬಿರದಲ್ಲಿ ಪಾಲ್ಗೊಂಡಿದ್ದರು.



ವಿಜಯಪುರ: ನೇತ್ರ ಶಸ್ತ್ರಚಿಕಿತ್ಸೆ ಬಳಿಕ ಗುಣಮುಖರಾಗಿ ತಮ್ಮ ಗ್ರಾಮಗಳಿಗೆ ತೆರಳಿದ ರೋಗಿಗಳು.

ಉದಯವಾಣಿ Thu, 12 December 2019 https://epaper.udayavani.com/c/46780735

REGISTRAR
BLDE (Deemed to be University)
Vijayapura-586103. Karnataka

# BLDE

## (DEEMED TO BE UNIVERSITY)

Declared as Deemed to be University u/s 3 of UGC Act, 1956

The Constituent College

SHRI B. M. PATIL MEDICAL COLLEGE, HOSPITAL & RESEARCH CENTRE, VIJAYAPURA

# ವಿಶೇಷಚೇತನರಿಗೆ ಸಹಾಯ ಮಾಡುವುದು ನಮ್ಮ ಕರ್ತವ್ಯ

**ವಿಕ ಸುದ್ದಿಲೋಕ** ವಿಜಯಪುರ

ವಿಶೇಷಚೇತನರಿಗೆ ನಾವು ಉಪಕಾರ ಮಾಡುತ್ತಿದ್ದೇವೆ. ಸಹಾನುಭೂತಿ ತೋರಿಸುತ್ತಿದ್ದೇವೆ ಎಂಬ ಭಾವನೆ ವ್ಯಕ್ತಪಡಿಸದೇ ಇದು ನಮ್ಮ ಕರ್ತವ್ಯವೆಂದರಿತು ಸಹಾಯ ಹಸ್ತ ಚಾಚಬೇಕಿದೆ ಎಂದು ಶಾಸಕ ಎಂ.ಬಿ.ಪಾಟೀಲ ಹೇಳಿದರು.

ನಗರದ ಬಿಎಲ್‌ಡಿಇ ಆಸ್ಪತ್ರೆಯಲ್ಲಿ ಬಬಲೇಶ್ವರ ವಿಧಾನಸಭಾ ಕ್ಷೇತ್ರ ಶಾಸಕರ ಅನುದಾನದಲ್ಲಿ 10 ಲಕ್ಷ ರೂ.ಗಳ ವೆಚ್ಚದಲ್ಲಿ 14 ಫಲಾನುಭವಿಗಳಿಗೆ ತ್ರಿಚಕ್ರ ವಾಹನ ಹಾಗೂ 5ಲಕ್ಷ ರೂ.ಗಳ ವೆಚ್ಚದಲ್ಲಿ ವಿಶೇಷಚೇತನರಿಗೆ ಕೃತಕ ಅಂಗಾಂಗ ಸಾಧನಗಳನ್ನು ವಿತರಿಸಿ ಅವರು ಮಾತನಾಡಿದರು.

ವಿಶೇಷಚೇತನರಿಗೆ ಕೇವಲ ಸಹಾನುಭೂತಿ, ಅನುಕಂಪ ವ್ಯಕ್ತಪಡಿಸುವುದರಿಂದ ಪ್ರಯೋಜನವಾಗದು. ಅವರ ಸ್ಥಿತಿಯಲ್ಲಿ ನಾವಿದ್ದರೇ ಹೇಗೆ? ಎಂಬುದನ್ನು ಅವಲೋಕಿಸಬೇಕು. ಸರಕಾರದ ನಾನಾ ಇಲಾಖೆಗಳಲ್ಲಿ ವಿಶೇಷಚೇತನರ ನಿಧಿಗೆ ಲಭ್ಯವಿರುವ ಅನುದಾನ ಕ್ರೋಢೀಕರಿಸಿ, ಹೆಚ್ಚಿನ ಸೌಲಭ್ಯ ಒದಗಿಸಬೇಕು. ಸೋಶಿಯಲ್ ಮೀಡಿಯಾಗಳಲ್ಲಿ ವಿಶೇಷಚೇತನರು ಕಾರ್ಯ ಕೌಶಲ್ಯಗಳ ಪ್ರೇರಣಾದಾಯಕ ವಿಡಿಯೋಗಳು ಲಭ್ಯವಿದ್ದು, ಅವುಗಳನ್ನು ಹೆಚ್ಚೆಚ್ಚು ತೋರಿಸಿ ಅವರಲ್ಲಿ ಆತ್ಮವಿಶ್ವಾಸ ಹೆಚ್ಚಿಸಬೇಕು ಎಂದರು.

ಬಿಎಲ್‌ಡಿಇ ಬಿ.ಎಂ.ಪಾಟೀಲ್ ವೈದ್ಯಕೀಯ ಕಾಲೇಜ್‌ನ ಪ್ರಾಚಾರ್ಯ ಡಾ.ಅರವಿಂದ ಪಾಟೀಲ ಮಾತನಾಡಿ, ಮಾನಸಿಕ ಹಾಗೂ ದೈಹಿಕ ಕಾಯಿಲೆಗಳಿಂದ ಬಳಲುವ ಮಕ್ಕಳಿಗೆ ಎಪಿಡಿ ಸಂಸ್ಥೆ ಸಹಯೋಗದಲ್ಲಿ ಆರಂಭಿಸಿದ ವಿಶೇಷ ಶಾಲೆಯನ್ನು ಬಿಎಲ್‌ಡಿಇ ವಿವಿಯಿಂದ ಧನ ಸಹಾಯ ಒದಗಿಸಿ ಮುಂದುವರಿಸಲಾಗುವದು. ಬರುವ ನ.1ರಂದು ಈ ಶಾಲೆಯನ್ನು ಉದ್ಘಾಟಿಸಲಾಗುವದು ಎಂದರು.

ವಿಶೇಷಚೇತನ ಇಲಾಖೆಯ ಹಿರಿಯ ಅಧಿಕಾರಿ ಉಪಾಧ್ಯ ಮಾತನಾಡಿ, 1991ರ ಕಾಯಿದೆ ಪ್ರಕಾರ 7 ಬಗೆಯ ವಿಶೇಷಚೇತನರನ್ನು ಗುರುತಿಸಲಾಗಿತ್ತು. ಇತ್ತೀಚಿನ ಕಾಯಿದೆ ಪ್ರಕಾರ 21ಬಗೆಯ ವಿಶೇಷಚೇತನರನ್ನುಗುರುತಿಸಲಾಗಿದೆ. ಇಲಾಖೆಯಿಂದ ದೊರೆಯುವ ಸೌಲಭ್ಯಗಳನ್ನು ಬಳಸಿ, ವಿಕಲಚೇತನರ ಮುಖ್ಯವಾಹಿನಿಯಲ್ಲಿ ಬರಬೇಕು ಎಂದರು.

ಉಪನಿರ್ದೇಶಕ ಸಿ.ಬಿ.ಕುಂಬಾರ, ಆಸ್ಪತ್ರೆ ಅಧೀಕ್ಷಕ ಡಾ.ವಿಜಯಕುಮಾರ ಕಲ್ಯಾಣಪ್ಪಗೋಳ, ಉಪಾಧೀಕ್ಷಕ ಡಾ.ವಿಜಯಕುಮಾರ ವಾರದ, ಡಾ.ರಾಜೇಶ ಹೊನ್ನುಟಗಿ, ಡಾ.ಕಸ್ತೂರ ಬಾಗೋಜಿ, ಡಾ.ಆರ್.ಎಂ.ಬಾಗೇವಾಡಿ, ಡಾ.ಪಿ.ಜಿ.ಮಂಟೂರ, ಡಾ.ವಿಕಾಸ ದೇಸಾಯಿ, ಗುರುಶಾಂತ ಹಿರೇಮಠ ಇತರರಿದ್ದರು.




ವಿಜಯಪುರದ ಬಿಎಲ್‌ಡಿಇ ಆಸ್ಪತ್ರೆಯಲ್ಲಿ ಶಾಸಕರ ಅನುದಾನದಡಿ ಬಬಲೇಶ್ವರ ಕ್ಷೇತ್ರದ ವಿಶೇಷಚೇತನರಿಗೆ ತ್ರಿಚಕ್ರ ವಾಹನ ಹಾಗೂ ಕೃತಕ ಅಂಗಾಂಗ ಸಾಧನಗಳನ್ನು ಶಾಸಕ ಎಂ.ಬಿ.ಪಾಟೀಲ ವಿತರಿಸಿದರು.

REGISTRAR
BLDE (Deemed to be University)
Vijayapura-586103. Karnataka

BLDE

(DEEMED TO BE UNIVERSITY)

Declared as Deemed to be University u/s 3 of UGC Act, 1956

The Constituent College

SHRI B. M. PATIL MEDICAL COLLEGE, HOSPITAL & RESEARCH CENTRE, VIJAYAPURA

ಉದಯವಾಣಿ
ಜನಮನದ ಜೀವನಾಡಿ

# ಉಚಿತ ಆರೋಗ್ಯ ತಪಾಸಣೆ

ವಿಜಯಪುರ: ಬಂಥನಾಳ ಸಂಗನಬಸವ ಶಿವಯೋಗಿಗಳ ಜನ್ಮದಿನ ಹಾಗೂ ದಿ। ಬಿ.ಎಂ. ಪಾಟೀಲ ಪುಣ್ಯಸ್ಮರಣೆ ಅಂಗವಾಗಿ ಬಿಎಲ್‌ಡಿಇ (ಡೀಮ್ಡ್ ವಿಶ್ವವಿದ್ಯಾಲಯ) ಬಿ.ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದಿಂದ ಜು. 9ರಿಂದ ಎರಡು ದಿನಗಳ ಕಾಲ ಉಚಿತ ಆರೋಗ್ಯ ಸೇವೆ ನೀಡಲಾಗುವದು. ಆರೋಗ್ಯ ಸೇವೆಯಲ್ಲಿ ಬರುವ ಹೊರ ರೋಗಿಗಳ ನೋಂದಣಿ, ಒಳ ರೋಗಿಗಳ ನೋಂದಣಿ. (ಸಾಮಾನ್ಯ ವಾರ್ಡ್‌ಗೆ), ಪ್ರಾಥಮಿಕ ತಪಾಸಣೆಗಳು (ರಕ್ತ ಪರೀಕ್ಷೆಗಳು, ಸಿಬಿಸಿ, ರಕ್ತದ ಸಕ್ಕರೆ ಅಂಶ, ಯುರಿಯಾ, ಕ್ರೀಯಾಟೀನಿನ್ ಹಾಗೂ ಮಲ ಮೂತ್ರ ಪರೀಕ್ಷೆಗಳು ಈ ಸೇವೆಗಳು ಒಳ ರೋಗಿಗಳಿಗೆ), ಎಲ್ಲ ತರಹದ ಸಾಮಾನ್ಯ ಶಸ್ತ್ರಚಿಕಿತ್ಸೆ (ಅಪೆಂಡಿಕ್ಸ್, ಚೀರ್, ಹರಿಣಿಯಾ, ಮೂಲವ್ಯಾ, ಕಾಂಚಬಿಂದು ಶಸ್ತ್ರಚಿಕಿತ್ಸೆ, ಸಿಝೇರಿಯನ್ ಹಾಗೂ ಗರ್ಭಕೋಶ ಶಸ್ತ್ರಚಿಕಿತ್ಸೆ ಎಲ್ಲಾ ತರಹದ ಗಂಟುಗಳ ಸಾಮಾನ್ಯ ವಾರ್ಡ್‌ಗೆ), ಉಚಿತವಾಗಿ ಎಕ್ಸ್‌ರೇ ಹಾಗೂ ಯುಎಸ್‌ಜಿ ತಪಾಸಣೆಗಳು (ಸಾಮಾನ್ಯ ವಾರ್ಡ್‌ನ ಒಳ ರೋಗಿಗಳಿಗೆ), ಸಾಮಾನ್ಯ/ಪ್ರಾಥಮಿಕ ಔಷಧಗಳು (ಸಾಮಾನ್ಯ ವಾರ್ಡ್ ಒಳ ರೋಗಿಗಳಿಗೆ) ಒದಗಿಸಲಾಗುವುದು ಎಂದು ಅಧೀಕ್ಷಕ ಡಾ। ವಿಜಯಕುಮಾರ ಕಲ್ಯಾಣಪ್ಪಗೋಳ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

09/07/2019 Vijayapura Pg 02

REGISTRAR
BLDE (Deemed to be University)
Vijayapura-586103. Karnataka

# BLDE

## (DEEMED TO BE UNIVERSITY)

Declared as Deemed to be University u/s 3 of UGC Act, 1956

The Constituent College

SHRI B. M. PATIL MEDICAL COLLEGE, HOSPITAL & RESEARCH CENTRE, VIJAYAPURA


# ಇಂದಿನಿಂದ ಆರೋಗ್ಯ ಉಚಿತ ತಪಾಸಣೆ ಶಿಬಿರ

**ವಿಜಯಪುರ:** ಶ್ರೀ ಬಂಥನಾಳ ಸಂಗನಬಸವ ಶಿವ ಯೋಗಿಗಳ ಜನ್ಮದಿನ ಹಾಗೂ ದಿ.ಬಿ.ಎಂ. ಪಾಟೀಲ ಅವರ ಪುಣ್ಯಸ್ಮರಣೆ ಅಂಗವಾಗಿ ಬಿ.ಎಲ್.ಡಿ.ಇ (ಡೀಮ್ಡ್ ವಿಶ್ವವಿದ್ಯಾಲಯ) ಬಿ.ಎಂ.ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ವತಿಯಿಂದ ಜು.೯ರಿಂದ ಎರಡು ದಿನ ಉಚಿತ ಆರೋಗ್ಯ ತಪಾಸಣೆ ಸೇವೆ ನೀಡಲಾಗುವುದು.

ಆರೋಗ್ಯ ಸೇವೆಯಲ್ಲಿ ಬರುವ ಹೊರ ರೋಗಿಗಳ ನೋಂದಣಿ, ಒಳ ರೋಗಿಗಳ ನೋಂದಣಿ. (ಸಾಮಾನ್ಯ ವಾರ್ಡ್‌ಗೆ), ಪ್ರಾಥಮಿಕ ತಪಾಸಣೆಗಳು (ರಕ್ತ ಪರೀಕ್ಷೆಗಳು, ಸಿಬಿಸಿ, ರಕ್ತದ ಸಕ್ಕರೆ ಅಂಶ, ಯುರಿಯಾ, ಕ್ರೀಯಾಟೀನಿನ್ ಹಾಗೂ ಮಲ ಮೂತ್ರ ಪರೀಕ್ಷೆಗಳು ಈ ಸೇವೆಗಳು ಒಳ ರೋಗಿಗಳಿಗೆ), ಎಲ್ಲಾ ತರಹದ ಸಾಮಾನ್ಯ ಶಸ್ತ್ರಚಿಕಿತ್ಸೆ (ಅಪೆಂಡಿಕ್ಸ್, ಚೇರ್, ಹರಿಣಿಯಾ, ಮೂಲವ್ಯಾಧಿ, ಕಾಂಚಬಿಂದು ಶಸ್ತ್ರಚಿಕಿತ್ಸೆ, ಸಿಝೇರಿಯನ್ ಹಾಗೂ ಗರ್ಭಕೋಶ ಶಸ್ತ್ರಚಿಕಿತ್ಸೆ ಎಲ್ಲಾ ತರಹದ ಗಂಟುಗಳ ಸಾಮಾನ್ಯ ವಾರ್ಡ್‌ಗೆ), ಉಚಿತವಾಗಿ ಎಕ್ಸ್ ರೇ ಹಾಗೂ ಯು.ಎಸ್.ಜಿ ತಪಾಸಣೆಗಳು , ಸಾಮಾನ್ಯ /ಪ್ರಾಥಮಿಕ ಔಷಧಿಗಳು ಒದಗಿಸಲಾಗುವುದು ಎಂದು ಅಧೀಕ್ಷಕ ಡಾ. ವಿಜಯಕುಮಾರ ಕಲ್ಯಾಣಪ್ಪಗೋಳ ತಿಳಿಸಿದ್ದಾರೆ.

ಕನ್ನಡಪ್ರಭ Tue, 09 July https://kpepa

REGISTRAR
BLDE (Deemed to be University)
Vijayapura-586103. Karnataka

BLDE

(DEEMED TO BE UNIVERSITY)

Declared as Deemed to be University u/s 3 of UGC Act, 1956

The Constituent College

SHRI B. M. PATIL MEDICAL COLLEGE, HOSPITAL & RESEARCH CENTRE, VIJAYAPURA

ಉದಯವಾಣಿ

# ಬಿಎಲ್‌ಡಿಇ ಕಾಲೇಜಿಗೆ ಪ್ರಶಸ್ತಿ



REGISTRAR
BLDE (Deemed to be University)
Vijayapura-586103. Karnataka

BLDE

(DEEMED TO BE UNIVERSITY)

Declared as Deemed to be University u/s 3 of UGC Act, 1956

The Constituent College

SHRI B. M. PATIL MEDICAL COLLEGE, HOSPITAL & RESEARCH CENTRE, VIJAYAPURA


VIJAYAVANI • VIJAYAPURA

ದಿನದ ಚಿತ್ರ

ಮುಖ್ಯಮಂತ್ರಿಯಿಂದ ಪ್ರಶಸ್ತಿ ಪ್ರದಾನ

ಸುದ್ದಿ ಕಾರ್ನರ್

ಬಿ.ಎಂ. ಪಾಟೀಲ ಆಸ್ಪತ್ರೆಗೆ ರಾಜ್ಯ ಪ್ರಶಸ್ತಿ

REGISTRAR
BLDE (Deemed to be University)
Vijayapura-586103. Karnataka

# BLDE

## (DEEMED TO BE UNIVERSITY)

Declared as Deemed to be University u/s 3 of UGC Act, 1956

The Constituent College

SHRI B. M. PATIL MEDICAL COLLEGE, HOSPITAL & RESEARCH CENTRE, VIJAYAPURA



ಅಂಗವಿಕಲರ ಪುನರ್ವಸತಿ ಕೇಂದ್ರಕ್ಕೆ ಅತ್ಯುತ್ತಮ ಸೇವಾ ಪ್ರಶಸ್ತಿ

REGISTRAR
BLDE (Deemed to be University)
Vijayapura-586103. Karnataka

# BLDE

## (DEEMED TO BE UNIVERSITY)

Declared as Deemed to be University u/s 3 of UGC Act, 1956

The Constituent College

SHRI B. M. PATIL MEDICAL COLLEGE, HOSPITAL & RESEARCH CENTRE, VIJAYAPURA

ವಿಶ್ವವಾಣಿ

## ಆರೋಗ್ಯವಂತ ಸಮಾಜಕ್ಕೆ ಯೋಗ ಅವಶ್ಯ



ವಿಜಯಪುರದ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದಲ್ಲಿ 4ನೇಯ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು.

**ವಿಜಯಪುರ:** ನಗರದ ಬಿಎಲ್‌ಡಿಇ ಡೀಮ್ಡ್ ವಿಶ್ವವಿದ್ಯಾಲಯದಲ್ಲಿ 4ನೇಯ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಆಚರಿಸಲಾಯಿತು. ಬಿಎಲ್‌ಡಿಇ ವೈದ್ಯಕೀಯ ಕಾಲೇಜು ಯೋಗ ವಿಜ್ಞಾನ ವಿಭಾಗ ಮುಖ್ಯಸ್ಥ ಡಾ. ಸತೀಶ. ಬಿ. ಪಾಟೀಲ ವಿವಿಧ ಆಸನಗಳ ತರಬೇತಿಯನ್ನು ನೀಡಿದರು.

ನಂತರ ನಡೆದ ಯೋಗ ದಿನಾಚರಣೆಯ ಅತಿಥಿಯಾಗಿ ಯೋಗ ತಜ್ಞ ಡಾ. ವಿಜಯಕುಮಾರ ಮಹಾನುಭಾವಿಗಳು ಪಾಲ್ಗೊಂಡು, ಪ್ರಾಚೀನ ಕಲೆಯಾದ ಯೋಗವನ್ನು ನಮ್ಮ ಹಿಂದಿನ ಋಷಿ ಮುನಿಗಳು, ಸಾಧುಗಳು, ಮುನಿಗಳು ನಮಗೆ ನೀಡಿದ ದೊಡ್ಡ ವರದಾನ ಈ ಯೋಗವಾಗಿದೆ. ಈ ಯೋಗ ಕಲೆಯನ್ನು ಭಾರತೀಯರಾದ ನಾವು ಹೆಚ್ಚಿನ ಉಪಯೋಗ ಪಡೆದುಕೊಂಡು ಆರೋಗ್ಯವಂತ ಸಮಾಜ ನಿರ್ಮಾಣಕ್ಕೆ ಮುಂದಾಗಬೇಕಿದೆ ಎಂದರು. ಯೋಗದ ಮಹತ್ವ ಮತ್ತು ಅಂತಾರಾಷ್ಟ್ರೀಯ ಮಟ್ಟದಲ್ಲಿ ಯೋಗ ಪಡೆದುಕೊಳ್ಳುತ್ತಿರುವ ಮಹತ್ವವನ್ನು ವಿವರಿಸಿದರು. ಪ್ರಾಚಾರ್ಯ ಡಾ. ಎಸ್.ಪಿ.ಗುಗ್ಗರಿಗೌಡ, ಡಾ. ತೇಜಸ್ವಿನಿ ವಲ್ಲಭ, ಡಾ.ವಿಜಯಕುಮಾರ ಕಲ್ಯಾಣಪ್ಪಗೋಳ, ಡಾ. ವಿಜಯ [illegible], ಡಾ. [illegible] ಕಲ್ಯಾಣಿ, ಎನ್‌ಎಸ್‌ಎಸ್ ಸಂಯೋಜಕ ಡಾ. ಆರ್.ಎಸ್.[illegible]. [illegible] ಇದ್ದರು.

REGISTRAR
BLDE (Deemed to be University)
Vijayapura-586103. Karnataka

# BLDE

## (DEEMED TO BE UNIVERSITY)

Declared as Deemed to be University u/s 3 of UGC Act, 1956

The Constituent College

SHRI B. M. PATIL MEDICAL COLLEGE, HOSPITAL & RESEARCH CENTRE, VIJAYAPURA

**Hosa Digantha 28-04-2017 P-3**

## ಆರೋಗ್ಯ ತಪಾಸಣೆ

ವಿಜಯಪುರ: ಬಸವ ಜಯಂತ್ಯುತ್ಸವ ಹಾಗೂ ಕಾರ್ಮಿಕರ ದಿನಾಚರಣೆ ಅಂಗವಾಗಿ ಬಿ.ಎಲ್.ಡಿ.ಇ. ಬಿ.ಎಂ.ಪಾಟೀಲ ವೈದ್ಯಕೀಯ ಕಾಲೇಜು, ಆಸ್ಪತ್ರೆಯಲ್ಲಿ ಉಚಿತ ಆರೋಗ್ಯ ತಪಾಸಣೆ ಹಮ್ಮಿಕೊಳ್ಳಲಾಗಿದೆ ಎಂದು ಆಸ್ಪತ್ರೆಯ ಅಧೀಕ್ಷಕ ಡಾ.ವಿಜಯಕುಮಾರ ಕಲ್ಯಾಣಪ್ಪಗೋಳ ತಿಳಿಸಿದ್ದಾರೆ. ಬಸವ ಜಯಂತಿ ದಿನ ಏ.29 ರಿಂದ ಕಾರ್ಮಿಕ ದಿನಾಚರಣೆ ಮೇ 1 ರವರೆಗೆ ಬೆಳಗ್ಗೆ 9 ರಿಂದ ಮಧ್ಯಾಹ್ನ 1 ವರೆಗೆ ನಡೆಯುವ ಈ ಉಚಿತ ಶಿಬಿರದಲ್ಲಿ ಹೊರ ರೋಗಿಗಳ ನೊಂದಣಿ, ರಕ್ತದಲ್ಲಿ ಸಕ್ಕರೆಯ ಅಂಶ, ಇ.ಸಿ.ಜಿ ಹಾಗೂ ಇತರೆ ತಪಾಸಣೆ ಉಚಿತವಾಗಿ ನಡೆಸಿ ವೈದ್ಯರ ಸಲಹೆ ಮೇರೆಗೆ ಶಿಬಿರಾರ್ಥಿಗಳಿಗೆ ರಿಯಾಯತಿ ದರದಲ್ಲಿ ಚಿಕಿತ್ಸೆ ನೀಡಲಾಗುವುದು. ಅಲ್ಲದೇ ನೇತ್ರ ತಪಾಸಣೆ ಮತ್ತು ನೇತ್ರ ಶಸ್ತ್ರಚಿಕಿತ್ಸೆಗಳನ್ನು ಉಚಿತವಾಗಿ ನೆರವೇರಿಸಲಾಗುವುದು. ಕಾರ್ಮಿಕರು ಹಾಗೂ ಸಾರ್ವಜನಿಕರು ಈ ಶಿಬಿರದ ಸದುಪಯೋಗವನ್ನು ಪಡೆದುಕೊಳ್ಳಲು ಆಸ್ಪತ್ರೆ ಪ್ರಕಟಣೆಯಲ್ಲಿ ತಿಳಿಸಿದ್ದು, ಹೆಚ್ಚಿನ ಮಾಹಿತಿಗಾಗಿ ಮೊ.78999-76267 ಗೆ ಸಂಪರ್ಕಿಸಲು ಕೋರಿದೆ.

REGISTRAR
BLDE (Deemed to be University)
Vijayapura-586103. Karnataka

# BLDE

## (DEEMED TO BE UNIVERSITY)


Declared as Deemed to be University u/s 3 of UGC Act, 1956

The Constituent College

SHRI B. M. PATIL MEDICAL COLLEGE, HOSPITAL & RESEARCH CENTRE, VIJAYAPURA

Vijaya Karnataka 21-04-2017 P-3

# ಡಾ.ಶೈಲಜಾಗೆ ಕಲ್ಪನಾ ಚಾವ್ಲಾ ಯುವ ವಿಜ್ಞಾನಿ ಪ್ರಶಸ್ತಿ ಪ್ರದಾನ



ಸಿಎಂ ಸಿದ್ದರಾಮಯ್ಯರಿಂದ 2016ನೇ ಸಾಲಿನ ಪ್ರತಿಷ್ಠಿತ ಡಾ.ಕಲ್ಪನಾ ಚಾವ್ಲಾ ಯುವ ಮಹಿಳಾ ವಿಜ್ಞಾನಿ ಪ್ರಶಸ್ತಿ ಸ್ವೀಕರಿಸಿದ ಬಿಎಲ್‌ಡಿಇ ಡೀಮ್ಡ್ ವಿವಿಯ ಸಮುದಾಯ ವೈದ್ಯಕೀಯ ವಿಭಾಗದ ಪ್ರಾಧ್ಯಾಪಕಿ ಡಾ.ಶೈಲಜಾ ಎಸ್.ಪಾಟೀಲ.

■ ವಿಕ ಸುದ್ದಿಲೋಕ ವಿಜಯಪುರ

ಇಲ್ಲಿನ ಬಿಎಲ್‌ಡಿಇ ಡೀಮ್ಡ್ ವಿವಿಯ ಸಮುದಾಯ ವೈದ್ಯಕೀಯ ವಿಭಾಗದ ಪ್ರಾಧ್ಯಾಪಕಿ ಡಾ.ಶೈಲಜಾ ಎಸ್.ಪಾಟೀಲ ಅವರು ರಾಜ್ಯ ಸರಕಾರದ ವಿಜ್ಞಾನ ಹಾಗೂ ಮಾಹಿತಿ ತಂತ್ರಜ್ಞಾನ ಇಲಾಖೆಯಿಂದ 2016ನೇ ಸಾಲಿನ ಪ್ರತಿಷ್ಠಿತ ಡಾ.ಕಲ್ಪನಾ ಚಾವ್ಲಾ ಯುವ ಮಹಿಳಾ ವಿಜ್ಞಾನಿ ಪ್ರಶಸ್ತಿ ಸ್ವೀಕರಿಸಿದರು.

ಇತ್ತೀಚೆಗೆ ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಿಎಂ ಸಿದ್ದರಾಮಯ್ಯ, ಭಾರತರತ್ನ ಪ್ರೊ.ಸಿಎನ್‌ಆರ್ ರಾವ್, ವಿಜ್ಞಾನ ಹಾಗೂ ತಂತ್ರಜ್ಞಾನ ಇಲಾಖೆ ಸಚಿವರು ಪ್ರಶಸ್ತಿ ಪ್ರದಾನ ಮಾಡಿದರು. ಇಲಾಖೆ ಪ್ರಧಾನ ಕಾರ್ಯದರ್ಶಿ ಗೌರವ ಗುಪ್ತಾ, ಭಾರತೀಯ ವಿಜ್ಞಾನ ಸಂಸ್ಥೆ ನಿರ್ದೇಶಕ ಅನುರಾಗ ಕುಮಾರ ಉಪಸ್ಥಿತರಿದ್ದರು.

ಡಾ.ಶೈಲಜಾ ಪಾಟೀಲರು 2004ರಿಂದ 2006 ರವರೆಗೆ ಯುನಿಸೆಫ್ ಸಲಹಾ ತಜ್ಞರಾಗಿ ಕಾರ್ಯ ನಿರ್ವಹಿಸಿದ್ದು ವೈದ್ಯಾಧಿಕಾರಿಗಳ ಕೌಶಲ್ಯ ಬೆಳೆಸುವಲ್ಲಿ ಹಾಗೂ ಚಿಕ್ಕಮಕ್ಕಳ ಲಸಿಕಾ ಸೇವೆಗಳನ್ನು ಸಂಘಟಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದಾರೆ. ದಿಲ್ಲಿಯ ಸೆಂಟರ್ ಫಾರ್ ಕ್ರಾನಿಕ್ ಡಿಸೀಸ್ ಕಂಟ್ರೋಲ್ ಸಂಸ್ಥೆಯಿಂದ ರೋಗ ತಡೆಗಟ್ಟುವಿಕೆ ತರಬೇತಿಗೆ ಆಯ್ಕೆಯಾಗಿ ಅಮೆರಿಕಾದ ಅಟ್ಲಾಂಟ್ ಎಮೋರಿ ವಿವಿಯಲ್ಲಿ ಅಧ್ಯಯನ ಮಾಡಿದ್ದಾರೆ. ಬದಲಾಗುತ್ತಿರುವ ಮನೆಯ ವಾತಾವರಣ ಹಾಗೂ ಹದಿ ವಯಸ್ಕರಲ್ಲಿನ ದೇಹ ತೂಕ ಬದಲಾವಣೆ ವಿಷಯಕ್ಕೆ ಅಮೆರಿಕಾ ರಾಷ್ಟ್ರೀಯ ಆರೋಗ್ಯ ಸಂಸ್ಥೆಯಿಂದ ಸಂಶೋಧನಾ ಧನಸಹಾಯ ಪಡೆದುಕೊಂಡಿದ್ದಾರೆ. ಡಾ.ಶೈಲಜಾ ಇದುವರೆಗೂ 28 ಸಂಶೋಧನಾ ಲೇಖನಗಳನ್ನು ಪ್ರಕಟಿಸಿದ್ದು, ಬಿಎಲ್‌ಡಿಇ ವಿವಿಯ ಸಂಶೋಧನಾ ವಿಭಾಗದಲ್ಲಿ ಉಪಮುಖ್ಯಸ್ಥೆ ಹಾಗೂ ಸಮುದಾಯ ಆರೋಗ್ಯ ವಿಭಾಗದ ಮುಖ್ಯಸ್ಥೆಯಾಗಿಯೂ ಕಾರ್ಯ ನಿರ್ವಹಿಸುತ್ತಿದ್ದಾರೆ.

REGISTRAR
BLDE (Deemed to be University)
Vijayapura-586103. Karnataka

BLDE

(DEEMED TO BE UNIVERSITY)

Declared as Deemed to be University u/s 3 of UGC Act, 1956

The Constituent College

SHRI B. M. PATIL MEDICAL COLLEGE, HOSPITAL & RESEARCH CENTRE, VIJAYAPURA


# ಹೊಳೆಮಸೂತಿಗೆ ಮೊಹ್ಸಿನ್ ಭೇಟಿ



ನಿಡಗುಂದಿ: ಹೊಳೆಮಸೂತಿ ಗ್ರಾಮದಲ್ಲಿ ಬಿಎಲ್‌ಡಿಇ ಮೆಡಿಕಲ್ ಕಾಲೇಜ್‌ನಿಂದ ಸ್ಥಾಪಿತ ಆರೋಗ್ಯ ಕೇಂದ್ರಕ್ಕೆ ವಿಜಯಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮೊಹ್ಮದ್ ಮೊಹ್ಸಿನ್ ಭೇಟಿ ನೀಡಿದರು.

ನಿಡಗುಂದಿ: ಕೃಷ್ಣಾ ನದಿ ಪ್ರವಾಹ ಪೀಡಿತ ತಾಲ್ಲೂಕಿನ ಹೊಳೆಮಸೂತಿ ಗ್ರಾಮಕ್ಕೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮೊಹ್ಮದ್ ಮೊಹ್ಸಿನ್ ಭೇಟಿ ನೀಡಿ ಪರಿಶೀಲಿಸಿದರು.

ಹೊಳೆಮಸೂತಿ ಗ್ರಾಮದ ಎಸ್‌ಸಿ ಕಾಲೋನಿ ನಿವಾಸಿಗಳು, ಪ್ರತಿ ಬಾರಿ ಪ್ರವಾಹ ಬಂದಾಗ ಕಾಲೊನಿಯ ಎಲ್ಲ ನಿವಾಸಿಗಳು ಬಸಿ ನೀರು ಸಮಸ್ಯೆಯಿಂದ ಸಾಕಷ್ಟು ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಕೂಡಲೇ ನಮಗೆ ಶಾಶ್ವತ ಪರಿಹಾರ ಕಲ್ಪಿಸುವಂತೆ ಆಗ್ರಹಿಸಿ ಮನವಿ ಸಲ್ಲಿಸಿದರು.

ಸ್ಥಳಾಂತರ ಮಾಡಲು ಯಾರಾದರೂ ಜಮೀನು ನೀಡಲು ಸಿದ್ಧವಿದ್ದರೆ ಹೇಳಿ ಕೂಡಲೇ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಮೊಹ್ಸಿನ್ ಹೇಳಿದರು.

ಗ್ರಾಮದ ಸುತ್ತಮುತ್ತ ನೀರಾವರಿ ಪ್ರದೇಶವಿರುವ ಕಾರಣ ಯಾರೂ ಜಮೀನು ನೀಡುವುದಿಲ್ಲ, ಜಿಲ್ಲಾಡಳಿತವೇ ಎಲ್ಲಿಯಾದರೂ ನಿವೇಶನ ಖರೀದಿಸಿ ಸ್ಥಳಾಂತರಗೊಳಿಸುವ ಮೂಲಕ ನಮ್ಮನ್ನು ಸಂಕಷ್ಟದಿಂದ ಪಾರು ಮಾಡಬೇಕು ಎಂದು ಆಗ್ರಹಿಸಿದರು.

## ಆರೋಗ್ಯ ತಪಾಸಣೆ

ವಿಜಯಪುರದ ಬಿಎಲ್‌ಡಿಇ ಸಂಸ್ಥೆಯ ಬಿ.ಎಂ. ಪಾಟೀಲ ವೈದ್ಯಕೀಯ ಮಹಾವಿದ್ಯಾಲಯ, ಆಸ್ಪತ್ರೆ ಹಾಗೂ ಸಂಶೋಧನಾ ಕೇಂದ್ರದ ನಾನಾ ತಜ್ಞ ವೈದ್ಯರ ತಂಡ ಕೃಷ್ಣಾ ನದಿ ತೀರದ ಆರಳಲದಿನ್ನಿ, ಯಲಗೂರು, ಹೊಳೆಮಸೂತಿ, ಮುದೂರು ಸೇರಿದಂತೆ ನಾನಾ ಗ್ರಾಮಗಳಿಗೆ ಭೇಟಿ ನೀಡಿ ಉಚಿತವಾಗಿ ಆರೋಗ್ಯ ತಪಾಸಣೆ ನಡೆಸಿತು.

ಈ ಕುರಿತು ಪರಿಶೀಲನೆ ನಡೆಸಿ ಸ್ಥಳಾಂತರಕ್ಕೆ ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಎಸಿ ಸೋಮಲಿಂಗ ಗೆಣ್ಣೂರ, ಬಸವನಬಾಗೇವಾಡಿ ತಹಶೀಲ್ದಾರ್ ಎಂ.ಎನ್. ಚೋರಗಸ್ತಿ, ನಿಡಗುಂದಿ ತಹಶೀಲ್ದಾರ್ ಜಿ.ಜಿ. ಪವಾರ, ಗ್ರಾಮ ಲೆಕ್ಕಾಧಿಕಾರಿ ನಾನಾಗೌಡ ಪಾಟೀಲ, ಗಂಗಾಧರ ಜೂಲಗುಡ್ಡ, ಆರೋಗ್ಯ ಇಲಾಖೆ, ಪೊಲೀಸ್ ಸಿಬ್ಬಂದಿ ಇದ್ದರು.

REGISTRAR
BLDE (Deemed to be University)
Vijayapura-586103. Karnataka

# BLDE

## (DEEMED TO BE UNIVERSITY)

Declared as Deemed to be University u/s 3 of UGC Act, 1956

The Constituent College

SHRI B. M. PATIL MEDICAL COLLEGE, HOSPITAL & RESEARCH CENTRE, VIJAYAPURA



74% 8:16 am

epaper.prajavani.net

ಪ್ರಜಾವಾಣಿ 5

ಮುಧೋಳಕ್ಕೆ ನುಗ್ಗುತ್ತಿದೆ ಘಟಪ್ರಭೆ ನೀರು; ಜನಜೀವನ ಅಸ್ತವ್ಯಸ್ತ

ಪ್ರವಾಹಕ್ಕೆ ತತ್ತರಿಸಿದೆ 'ರನ್ನನ ನಾಡು'

ಪರಿಹಾರ ಕಾರ್ಯ ಬಿರುಸು

ವೈದ್ಯಕೀಯ ನೆರವಿನ ಹಸ್ತ...

ನೆಲ್ಲಿ ಪ್ರಿಯರಿಂದ ತೊಂದರೆ..

ಮಳೆ ಅಬ್ಬರ ಜನ ತತ್ತರ

ನಿರಾಶ್ರಿತರಿಗೆ ಸಾಂತ್ವನ ಹೇಳಿದ ಸಿ.ಎಂ

ಘಟಪ್ರಭಾ ಪ್ರವಾಹ: ರಸ್ತೆಗಳು ಬಂದ

BOSCH

ನಾವು ನಿಮ್ಮ

REGISTRAR
BLDE (Deemed to be University)
Vijayapura-586103. Karnataka

# BLDE

## (DEEMED TO BE UNIVERSITY)

Declared as Deemed to be University u/s 3 of UGC Act, 1956

The Constituent College

SHRI B. M. PATIL MEDICAL COLLEGE, HOSPITAL & RESEARCH CENTRE, VIJAYAPURA

# ಬಿಎಲ್‌ಡಿಇ ವೈದ್ಯರಿಂದ ಸಂತ್ರಸ್ತರಿಗೆ ಉಚಿತ ಸೇವೆ





### ಆರೋಗ್ಯ ತಪಾಸಣೆ

### ವೈದ್ಯಕೀಯ ನೆರವು ಅಗತ್ಯವಿದ್ದರೆ ಕರೆ ಮಾಡಿ

REGISTRAR
BLDE (Deemed to be University)
Vijayapura-586103. Karnataka